## ಪ್ರಶಸ್ತಿ ವಿವರ

**₹39 ಕೋಟಿ**
ವಿಜೇತರು

**₹19.5 ಕೋಟಿ**
ರನ್ನರ್ಸ್ ಅಪ್

**₹9.89 ಕೋಟಿ**
ಸೆಮಿಫೈನಲ್ ಸೋತವರಿಗೆ

**₹2.5 ಕೋಟಿ**
ಗುಂಪು ಹಂತದಲ್ಲಿ ಆಡುವ ಎಲ್ಲ ತಂಡಗಳು

(ಹೋದ ಬಾರಿಗಿಂತಲೂ ಈ ಬಾರಿ ನಗದು ಪುರಸ್ಕಾರ ಹೆಚ್ಚಿದೆ. ಇದು ದಾಖಲೆ)



ಭಾರತ ತಂಡದ ಬ್ಯಾಟರ್ ಸ್ಮೃತಿ ಮಂದಾನ –ಪಿಟಿಐ ಚಿತ್ರ

- ಟೂರ್ನಿ ದಿನಾಂಕ: ಸೆಪ್ಟೆಂಬರ್ 30ರಿಂದ ನವೆಂಬರ್ 2
- ಆತಿಥ್ಯ: ಭಾರತ, ಶ್ರೀಲಂಕಾ
- ಸ್ಪರ್ಧಿಸುವ ತಂಡಗಳು; 8
- ಹಾಲಿ ಚಾಂಪಿಯನ್: ಆಸ್ಟ್ರೇಲಿಯಾ (7 ಬಾರಿ ಪ್ರಶಸ್ತಿ ಗೆದ್ದಿದೆ)

ಕಂಗಳ ಈ ಹುಡುಗಿಯಲ್ಲಿ ಅದೆಂತಹ ಶಕ್ತಿ ಇತ್ತೆಂದರೆ, 120–130 ಕಿ.ಮೀ. (ಪ್ರತಿ ಗಂಟೆ) ವೇಗದ ಎಸೆತಗಳನ್ನು ಹಾಕುತ್ತಿದ್ದರು. ಬ್ಯಾಟಿಂಗ್ ಮಾಡುವ ಹುಡುಗರು ಈಕೆಯ ಎಸೆತಗಳನ್ನು ಉಡಾಫೆ ಮಾಡುವಂತೆಯೇ ಇರಲಿಲ್ಲ. ಬರಿಗಾಲಿನಲ್ಲಿ ಓಡಿ ಬಂದು ಚೆಂಡೆಸೆಯುತ್ತಿದ್ದ ಈ ಹುಡುಗಿಯ ಪ್ರತಿಭೆಗೆ ಅಪ್ಪ ಮನಸೋತರು. ತಮ್ಮ ಆರ್ಥಿಕ ಕಷ್ಟ,ನಷ್ಟಗಳ ನಡುವೆಯೂ ಅಕಾಡೆಮಿಗೆ ಸೇರಿದರು. ಭಾರತ ಮಹಿಳಾ ಕ್ರಿಕೆಟ್‌ನ ಮತ್ತೊಬ್ಬ ‘ಜೂಲನ್ ಗೋಸ್ವಾಮಿ’ಆಗುವ ಭರವಸೆಯನ್ನು ಈ ಕ್ರಾಂತಿ ಗೌಡ್ ಮೂಡಿಸಿದ್ದಾರೆ

***

ಮತ್ತೊಬ್ಬ ಮಧ್ಯಮವೇಗಿ ಅರುಂಧತಿ ರೆಡ್ಡಿ ಅವರದ್ದು ತೆಲಂಗಾಣ ರಾಜ್ಯ. ಅವರ ತಾಯಿ ವಾಲಿಬಾಲ್ ಆಟಗಾರ್ತಿಯಾಗಿದ್ದರು. ಆದರೆ ರಾಷ್ಟ್ರ ತಂಡದಲ್ಲಿ ಆಡುವ ಅವರ ಆಸೆ ಕೈಗೂಡಿರಲಿಲ್ಲ. ಮಗಳನ್ನು ರಾಷ್ಟ್ರಮಟ್ಟದ ಕ್ರೀಡಾಪಟುವನ್ನಾಗಿಸುವ ಅವರ ಛಲಕ್ಕೆ ಸ್ಪಂದಿಸಿದ ಅರುಂಧತಿ ಕ್ರಿಕೆಟ್ ಆಟಗಾರ್ತಿಯಾಗಿ ರೂಪುಗೊಂಡರು. ಅದೂ ಮಧ್ಯಮವೇಗಿಯಾಗಿ ಮಿಂಚುತ್ತಿರುವ ಅರುಂಧತಿ ಈಗ ತಂಡದ ಬೌಲಿಂಗ್ ಹೊಣೆಯನ್ನು ನಿಭಾಯಿಸುತ್ತಿದ್ದಾರೆ. 28 ವರ್ಷದ ಅರುಂಧತಿ ಈಗ ವಿಶ್ವಕಪ್ ಅಂಗಳದಲ್ಲಿ ಮಿಂಚಲು ಸಿದ್ಧರಾಗಿದ್ದಾರೆ.

***

ಆಂಧ್ರಪ್ರದೇಶದ ಕಡಪ ಜಿಲ್ಲೆಯಿಂದ ಭಾರತ ಮಹಿಳಾ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದ ಮೊದಲ ಆಟಗಾರ್ತಿ ಶ್ರೀ ಚರಣಿ. 20 ವರ್ಷದ ಚರಣಿ ಬ್ಯಾಡ್ಮಿಂಟನ್ ಆಟಗಾರ್ತಿಯಾಗಬೇಕೆಂಬ ಆಸೆ ಅವರ ಅಪ್ಪ ಚಂದ್ರಶೇಖರ್ ರೆಡ್ಡಿ ಅವರದ್ದಾಗಿತ್ತು. ಥರ್ಮಲ್ ವಿದ್ಯುತ್ ಯೋಜನೆಯ ಕಚೇರಿಯಲ್ಲಿ ಚಿಕ್ಕ ಹುದ್ದೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಬಾಲ್ಯದಲ್ಲಿ ಕೊಕ್ಕೊ ಆಡಿಕೊಂಡಿದ್ದ ಚರಣಿ ಸ್ಮೃತಿ ಮಂದಾನ ಮತ್ತು ಯುವರಾಜ್ ಸಿಂಗ್ ಅವರಿಂದ ಪ್ರಭಾವಿತರಾಗಿ ಕ್ರಿಕೆಟ್‌ನತ್ತ ವಾಲಿದರು. ಇದೀಗ 21 ವರ್ಷದ ಚರಣಿ ಅವರು ಸ್ಮೃತಿ ಅವರೊಂದಿಗೆ ಡ್ರೆಸಿಂಗ್ ರೂಮ್ ಹಂಚಿಕೊಂಡಿದ್ದಾರೆ. ಕಳೆದ ಜೂನ್‌ನಲ್ಲಿ ಇಂಗ್ಲೆಂಡ್ ವಿರುದ್ಧದ ಏಕದಿನ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು. ಭಾರತದ ಆತಿಥ್ಯದಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಯಲ್ಲಿ ಸ್ಪಿನ್ನರ್‌ಗಳ ಪಾತ್ರವೇ ದೊಡ್ಡದು. ಆದ್ದರಿಂದ ದೀಪ್ತಿ ಸಿಂಗ್, ಸ್ನೇಹ ರಾಣಾ ಅವರೊಂದಿಗೆ ಚರಣಿ ಆಟವೂ ಮಹತ್ವದ್ದಾಗಲಿದೆ.

***

ಕ್ರಾಂತಿ, ಅರುಂಧತಿ ಮತ್ತು ಚರಣಿ ಅವರಿಗೆ ಇದು ಚೊಚ್ಚಲ ವಿಶ್ವಕಪ್ ಟೂರ್ನಿ. ಅದೂ ತವರಿನಂಗಳದಲ್ಲಿ ಆಡುವ ಸುವರ್ಣಾವಕಾಶವೂ ಹೌದು. ಎರಡು ಬಾರಿಯ ರನ್ನರ್ಸ್ ಅಪ್ ತಂಡ ಭಾರತಕ್ಕೆ ಮೊದಲ ಕಿರೀಟ ದಕ್ಕಿಸಿಕೊಡುವ ಛಲ ಈ 'ಝೆನ್ ಝೀ' ಆಟಗಾರ್ತಿಯರದ್ದು.

ಇವರಷ್ಟೇ ಅಲ್ಲ. ಕಳೆದ ಒಂದೂವರೆ ದಶಕದಿಂದ ಮಹಿಳಾ ತಂಡದಲ್ಲಿರುವ ಹರ್ಮನ್‌ಪ್ರೀತ್ ಕೌರ್, ಭಾರತ ತಂಡದ ಭವಿಷ್ಯದ ನಾಯಕಿ ಸ್ಮೃತಿ ಮಂದಾನ, ಕ್ರಿಕೆಟ್‌ಗೂ ಸೈ, ಹಾಡು–ನೃತ್ಯ, ಹಾಸ್ಯಕ್ಕೂ ಜೈ ಎನ್ನುವ ಜೆಮಿಮಾ ರಾಡ್ರಿಗಸ್, ಮಿಂಚಿನ ವೇಗದ ಫೀಲ್ಡರ್ ಹರ್ಲೀನ್ ಡಿಯೊಲ್, ವಿಕೆಟ್‌ಕೀಪರ್ ರಿಚಾ ಘೋಷ್, ಸ್ಪಿನ್ನರ್ ರಾಧಾ ಯಾದವ್, ಆಲ್‌ರೌಂಡರ್ ದೀಪ್ತಿ ಮತ್ತು ಮಧ್ಯಮವೇಗಿ ರೇಣುಕಾ ಸಿಂಗ್ ಠಾಕೂರ್ ಅವರಿಗೂ ಈ ವಿಶ್ವಕಪ್ ಟೂರ್ನಿ ಪ್ರತಿಷ್ಠೆಯ ಕಣವಾಗಿದೆ.

ಏಕೆಂದರೆ; ವಿಶ್ವಕಪ್ ಟೂರ್ನಿ ಆರಂಭವಾಗಿ 52 ವರ್ಷಗಳು ಕಳೆದುಹೋಗಿವೆ. ಆದರೆ ಭಾರತ ಇದುವರೆಗೂ ಒಂದು ಬಾರಿಯೂ ಚಾಂಪಿಯನ್ ಆಗಿಲ್ಲ. ಆದರೆ ಎರಡು ಸಲ ಫೈನಲ್ ತಲುಪಿದ ತಂಡವು




ಭಾರತ ತಂಡದ ಹರ್ಲೀನ್ ಡಿಯೊಲ್ –ಪಿಟಿಐ ಚಿತ್ರ

ಕೊಲಂಬೊದಲ್ಲಿ ನಡೆದ ಐಸಿಸಿ ಮಹಿಳಾ ವಿಶ್ವಕಪ್ ಕ್ರಿಕೆಟ್ ಟ್ರೋಫಿ ಪ್ರವಾಸದ ಅಂಗವಾಗಿ ಶ್ರೀಲಂಕಾ ತಂಡದ ನಾಯಕಿ ಚಾಮರಿ ಅಟಪಟ್ಟು ಅವರು ಕ್ರೀಡಾಂಗಣಕ್ಕೆ ಟ್ರೋಫಿ ತಂದರು –ಎಪಿ/ಪಿಟಿಐ ಚಿತ್ರ

